ಗಾಂಧಿನಗರ
ಪೋಸ್ಟ್




# ಚಿತ್ರ ಭಾರತಿ 50

ಭಾರತಿ ವಿಷ್ಣುವರ್ಧನ್ ಅವರ ವೃತ್ತಿಬದುಕಿಗೆ ಐವತ್ತು ವರ್ಷ! ಎಪ್ಪತ್ತು ಎಂಬತ್ತರ ದಶಕದ ಕನ್ನಡ ಚಿತ್ರರಸಿಕರ ಪಾಲಿಗೆ ಭಾರತಿ ಅವರು ವಿಶ್ವಸುಂದರಿ ಇದ್ದಂತೆ. ಗಂಡಸರ ಮಾತಿರಲಿ, ಹೆಣ್ಣುಮಕ್ಕಳು ಕೂಡ ಚೆಲುವಿನ ಮಾದರಿಯನ್ನಾಗಿ ಭಾರತಿ ಅವರನ್ನು ಉದಾಹರಿಸುತ್ತಿದ್ದ ದಿನಗಳವು. ರಾಜಕುಮಾರ್–ಭಾರತಿ ಅವರ ಜೋಡಿಯಂತೂ ಪ್ರೇಕ್ಷಕರನ್ನು ಮೋಡಿಗೊಳಿಸಿತ್ತು. 'ಬಂಗಾರದ ಮನುಷ್ಯ', 'ಬಂಗಾರದ ಜಿಂಕೆ', 'ಹಸಿರು ತೋರಣ', 'ಶ್ರೀಕೃಷ್ಣದೇವರಾಯ', 'ಬಿಡುಗಡೆ', 'ಗಂಗೆ ಗೌರಿ', 'ಕುಲ ಗೌರವ', 'ದುಡ್ಡೇ ದೊಡ್ಡಪ್ಪ', 'ಶ್ರೀಕೃಷ್ಣ ರುಕ್ಮಿಣಿ ಸತ್ಯಭಾಮ', 'ಬಾಳು ಬೆಳಗಿತು' ಚಿತ್ರಗಳಿಂದ ಹಿಡಿದು ಇತ್ತೀಚಿನ ವರ್ಷಗಳ 'ಪ್ರೀತಿ ಪ್ರೇಮ ಪ್ರಣಯ' ಸಿನಿಮಾಗಳವರೆಗೆ ಭಾರತಿ ಅವರು ಜೀವ ತುಂಬಿದ ಪಾತ್ರಗಳು ಒಂದೆರಡಲ್ಲ.

ನಟನೆ ಮಾತ್ರವಲ್ಲ, ಸಜ್ಜನಿಕೆ ಮತ್ತು ವೃತ್ತಿಪರತೆ ಕಾರಣದಿಂದಲೂ ಭಾರತಿ ಅವರದು ಮಾದರಿ ವ್ಯಕ್ತಿತ್ವ. ಮರಾಠಿ ಕುಟುಂಬದಲ್ಲಿ ನೆಲೆಸಿದ ಅವರು ಕನ್ನಡ ಕುಟುಂಬಗಳ ಮನೆ ಮಗಳಾಗಿ ಗುರ್ತಿಸಿಕೊಂಡಿದ್ದು ಸಣ್ಣ ಸಾಧನೆಯೇನಲ್ಲ. 'ಲವ್ ಇನ್ ಬೆಂಗಳೂರ್' (1966) ಸಿನಿಮಾ ಮೂಲಕ ಕನ್ನಡ ಚಿತ್ರರಂಗ ಪ್ರವೇಶಿಸಿದ ಅವರು, ಅದಕ್ಕೆ ಎರಡು ವರ್ಷಗಳ ಮೊದಲೇ ಹಿಂದಿ ಚಿತ್ರವೊಂದರಲ್ಲಿ ನಟಿಸಿದ್ದರು. ನಂತರ ತಮಿಳು, ತೆಲುಗು, ಮಲಯಾಳಂ ಸಿನಿಮಾಗಳಲ್ಲಿ ಅಭಿನಯಿಸುವ ಮೂಲಕ ಪಂಚಭಾಷಾ ನಟಿ ಎನ್ನಿಸಿಕೊಂಡರು. ರಾಜಕುಮಾರ್, ವಿಷ್ಣುವರ್ಧನ್, ದಿಲೀಪ್ ಕುಮಾರ್, ಅಕ್ಕಿನೇನಿ ನಾಗೇಶ್ವರರಾವ್, ಶಿವಾಜಿ ಗಣೇಶನ್– ಹೀಗೆ ಹಲವು ಸೂಪರ್ ಸ್ಟಾರ್‌ಗಳ ಜೊತೆ ನಟಿಸಿದ ಖ್ಯಾತಿ ಅವರದು. ಇಷ್ಟಾದರೂ ಭಾರತಿ ನೆಲದ ಮೇಲೆಯೇ ಉಳಿದರು.

ಆಗಸ್ಟ್ 15 ಭಾರತಿ ಅವರ ಜನ್ಮದಿನ. ಕಳೆದ ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ತಮ್ಮ ವೃತ್ತಿ ಬದುಕಿನ ಚಿನ್ನದ ಹಬ್ಬವನ್ನು ಭಾರತಿ ಬಂಧುಮಿತ್ರರ ಸಂಗಡ ಆಚರಿಸಿಕೊಂಡಿದ್ದಾರೆ. ವಿಪರ್ಯಾಸ ನೋಡಿ; ಈ ಸಂಭ್ರಮ ಚಿತ್ರರಸಿಕರ ಸಂಭ್ರಮವಾಗಬೇಕಿತ್ತು. ಆ ನಿಟ್ಟಿನಲ್ಲಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಪ್ರಯತ್ನ ನಡೆಸಬೇಕಿತ್ತು. ಆದರೆ, ನೆನಪುಗಳ ಹಂಗು ಮತ್ತು ಪರಂಪರೆಯ ಒಜ್ಜೆಯನ್ನು ವಾಣಿಜ್ಯ ಮಂಡಳಿ ಕಳೆದುಕೊಂಡು ತುಂಬಾ ದಿನವಾದಂತಿದೆ.

## ಪ್ರೇಮದ ಸ್ಕೇಟಿಂಗ್!

'ಅಮೆರಿಕ ಅಮೆರಿಕ' ಚಿತ್ರದಿಂದ ಇತ್ತೀಚಿನ 'ನಿನ್ನಿಂದಲೇ'ವರೆಗೆ ಅಮೆರಿಕದಲ್ಲಿ ಚಿತ್ರೀಕರಣ ನಡೆಸಿರುವ ಅನೇಕ ಕನ್ನಡ ಸಿನಿಮಾಗಳಿವೆ. ಇವುಗಳ ಪಾಲಿಗೆ ಹೊಸ ಸೇರ್ಪಡೆ 'ಇ–ಪ್ರೀತಿ'. ನಾಯಕ–ನಾಯಕಿಯರ ನಡುವಣ ಸಲ್ಲಾಪದ ಕಾರಣದಿಂದಾಗಿ ಸುದ್ದಿ ಮಾಡಿದ್ದ ಈ ಸಿನಿಮಾ ಇದೀಗ ಮತ್ತೆ ನಿದ್ದೆಯಿಂದ ಎಚ್ಚರಗೊಂಡಂತಿದೆ.



'ಇ–ಲವ್' ಪ್ರಿಯಾಭಾರತಿ ನಿರ್ದೇಶನದ ಸಿನಿಮಾ. ಕನ್ನಡ ಸಿನಿಮಾವೊಂದನ್ನು ಮಾಡಲೇಬೇಕು ಎನ್ನುವ ಹಟದಿಂದ ಪ್ರಿಯಾಭಾರತಿ ಅವರು ಎಲ್ಲ ಅಡೆತಡೆಗಳನ್ನು ಎದುರಿಸಿ, ಕಳೆದ ಐದು ವರ್ಷಗಳಿಂದ ಸಿನಿಮಾದ ಬಗೆಗಿನ ತಮ್ಮ ಉತ್ಸಾಹವನ್ನು ಉಳಿಸಿಕೊಂಡಿದ್ದಾರೆ. ಶೇ 90 ಭಾಗದ ಚಿತ್ರೀಕರಣ ಅಮೆರಿಕದಲ್ಲಿ ನಡೆದಿರುವುದು ಈ ಚಿತ್ರದ ವಿಶೇಷ. ಅಮೆರಿಕ ಮತ್ತು ಭಾರತದ ನಡುವಣ ಈ ಕಥೆ, ಸೈಬರ್ ಯುಗದ ನವನವೀನ ಪ್ರೇಮಕಥೆಯನ್ನು ಒಳಗೊಂಡಿದೆಯಂತೆ. ಪ್ರೇಮದಷ್ಟೇ ಮುಖ್ಯಪಾತ್ರ ಸ್ಕೇಟಿಂಗ್ ಆಟಕ್ಕೂ ಇದೆ ಎನ್ನುವುದು ನಿರ್ದೇಶಕಿಯ ಹೇಳಿಕೆ. ಉಳಿದಂತೆ ಪೂರ್ವ ಪಶ್ಚಿಮ ಧ್ರುವಗಳ ನಡುವಣ ಸಂಸ್ಕೃತಿ ಸಂಘರ್ಷವೂ ಚಿತ್ರದಲ್ಲಿ ಇರಲಿದೆ.

ದಿಗಂತ್ ಹಾಗೂ ತೇಜಸ್ವಿನಿ 'ಇ–ಪ್ರೀತಿ'ಯ ಪ್ರಣಯಪಕ್ಷಿಗಳು. ಇಬ್ಬರಿಗೂ ಸಿನಿಮಾ ಖುಷಿ ಕೊಟ್ಟಿದೆ. 'ಸಿನಿಮಾದ ತುಂಬ ಸುಂದರ ಲೊಕೇಶನ್‌ಗಳೇ ತುಂಬಿವೆ' ಎನ್ನುತ್ತಾರೆ ತೇಜಸ್ವಿನಿ. ಅಂದ ಹಾಗೆ, 'ಇ-ಲವ್' ಚಿತ್ರೀಕರಣ ಈಗಾಗಲೇ ಮುಗಿದಿದೆ. ಅಕ್ಟೋಬರ್‌ನಲ್ಲಿ ಚಿತ್ರವನ್ನು ತೆರೆ ಕಾಣಿಸುವುದು ಚಿತ್ರತಂಡದ ಉದ್ದೇಶ.

■ ರಘು